# ಮಕ್ಕಳಿಗೆ ಬಣ್ಣದ ಚೋಕರ್



**ಪುಟಾಣಿಗಳಿಗಾಗಿಯೇ ಬಣ್ಣಬಣ್ಣದ ಚೋಕರ್‌ಗಳು ಮಾರುಕಟ್ಟೆಗೆ ಬಂದಿವೆ. ಜರಿಲಂಗ, ಲೆಹೆಂಗಾ, ಸ್ಕರ್ಟ್, ಹಾಫ್ ಸಾರಿ... ಹೀಗೆ ಯಾವುದೇ ವೈವಿಧ್ಯದ ಉಡುಪು ತೊಟ್ಟರೂ ಚೋಕರ್ ಧರಿಸಿದರೆ ಮಕ್ಕಳು ಸಖತ್ತಾಗಿ ಮಿಂಚಬಹುದು.**

**ಉಮಾ ವೇಣೂರು**

ಚಿತ್ರಕೃಪೆ: ತನಿಷ್ಕ್

ಕಡು ಬಣ್ಣದ ಜರಿ ಲಂಗ ತೊಟ್ಟ ಪುಟ್ಟ ಪೋರಿ ಕೊರಳ ತುಂಬ ಬಣ್ಣ ಬಣ್ಣದ ಚೋಕರ್ ಧರಿಸಿ ಕುಣಿಕುಣಿತಾ ಬಂದರೆ ನೋಡಲು ಎರಡು ಕಣ್ಣುಗಳೇ ಸಾಲದು. ಮಗಳ ಹೊಳೆವ ಕಣ್ಣುಗಳನ್ನೇ ದಿಟ್ಟಿಸಿ ಎರಡೂ ಕೈಗಳಿಂದ ಮಗಳನ್ನು ಹಿಡಿದು ತಬ್ಬಿ ನಿವಾಳಿಸಿದರೇ ತಾಯಿಗೆ ಸಮಾಧಾನ. ಅಷ್ಟು ಚಂದದ ನೋಟ ನೀಡುತ್ತದೆ ಈ ಬಣ್ಣಬಣ್ಣದ ಚೋಕರ್. ಇದೀಗ ಪುಟ್ಟ ಪುಟ್ಟ ಹೆಣ್ಣು ಮಕ್ಕಳಿಗಾಗಿಯೇ ಚೋಕರ್‌ಗಳು ಬಂದಿವೆ. ಹರಳು, ರೂಬಿ, ಎಮರಾಲ್ಡ್, ಮುತ್ತುಗಳನ್ನು ಪೋಣಿಸಿ, ಚಿನ್ನದ ಸರದಲ್ಲಿ ಕಟ್ಟಿಸಿ ಮಾಡಿರುವ ಚೋಕರ್‌ಗಳಲ್ಲಿ ಮುದ್ದು ಮಗಳು 'ಎವರ್ ಗ್ರೀನ್ ಹೀರೊ' ರೀತಿ ಶೋಭಿಸುವುದನ್ನು ನೋಡುವುದೇ ಚಂದ.

ಮದುವೆ, ಮುಂಜಿಗಳಂತಹ ಶುಭ ಸಮಾರಂಭದ ಸೀಸನ್ ಆರಂಭವಾಗಿದೆ. ಮಹಿಳೆಯರು ರೇಷ್ಮೆ ಸೀರೆ ಜತೆಗೆ ಚಿನ್ನದ ಆಭರಣಗಳನ್ನೂ ತೊಟ್ಟು ಸಂಭ್ರಮಿಸುವ ಕಾಲ. ಚಿಣ್ಣರಂತೂ ಜರಿಲಂಗ, ಗ್ರ್ಯಾಂಡ್ ಆಗಿರುವ ಫ್ರಾಕ್, ಹಾಫ್ ಸಾರಿ ಹಾಕಿ ಮಿಂಚುವ ಸಮಯ. ಈ ನವೀನ ವಿನ್ಯಾಸಗಳ ಉಡುಪಿನ ಜೊತೆಗೆ ಹೊಸ ಟ್ರೆಂಡ್‌ಗೆ ತಕ್ಕ ಒಡವೆಗಳನ್ನು ತೊಟ್ಟು ವಿಭಿನ್ನವಾಗಿ ಕಾಣಬೇಕು ಎಂದು ಬಯಸುವ ಪುಟಾಣಿಗಳಿಗಾಗಿಯೇ ವೈವಿಧ್ಯಮಯ 'ಬಣ್ಣದ ಚೋಕರ್'ಗಳು ಫ್ಯಾಷನ್ ಜಗತ್ತಿಗೆ ಲಗ್ಗೆ ಇಟ್ಟಿವೆ.

'ಉಡುಪಿಗೆ ತಕ್ಕ ಒಡವೆ' ಥಿಯರಿಗೆ ಅತ್ಯಂತ ಸೂಕ್ತವಾದ ಚೋಕರ್‌ಗಳು ಚಿನ್ನದಿಂದ ಮಾಡಿದ್ದಷ್ಟೇ ಅಲ್ಲದೆ ದುಬಾರಿ ಹರಳುಗಳಾದ ಎಮರಾಲ್ಡ್, ರೂಬಿ, ಮುತ್ತು, ಹವಳಗಳಿಂದ ಮಾಡಿದ್ದು ಕೂಡ ಮಕ್ಕಳ ಮನತಣಿಸುತ್ತಿದೆ. ಇವೆಲ್ಲದರ ಜತೆಗೆ ಆ್ಯಂಟಿಕ್ ಆಭರಣಗಳೂ ಪುಟ್ಟ ಹುಡುಗಿಯರ ಕತ್ತಲ್ಲಿ ಮಿಂಚಿ ಮೆರೆದಾಡುತ್ತಿದೆ. ಫ್ಯಾಷನ್ ಲೋಕದಲ್ಲಿ ಹೊಸ ಟ್ರೆಂಡ್ ಸೃಷ್ಟಿಸಿದ ಚೋಕರ್‌ಗಳು ಶುಭ ಸಮಾರಂಭಗಳಿಗೆ ಅತ್ಯಂತ ಸೂಕ್ತವಾದವು. ಮಕ್ಕಳಿಗಾಗಿಯೇ ಬಂದಿರುವ ಪುಟಾಣಿ ನೆಕ್ಲೇಸ್, ಮುತ್ತಿನ ಸರಗಳಿಗಿಂತಲೂ ಚೋಕರ್ ಬಹಳ ಚೆನ್ನಾಗಿ ಕಾಣುತ್ತದೆ. 'ಸಿಂಗಲ್ ಪೀಸ್ ಆರ್ನಮೆಂಟ್' ಎಂದೇ ಕರೆಯಲಾಗುವ ಚೋಕರ್ ಇಂದಿನ ಫ್ಯಾಷನ್‌ಗೆ ಹೊಂದುವಂತೆ ವೈವಿಧ್ಯಮಯ ವಿನ್ಯಾಸಗಳಲ್ಲಿ ಮಾರುಕಟ್ಟೆಗೆ ಬಂದಿದ್ದು, ಆಧುನಿಕ ಮನೋಭಾವದ ಯುವತಿಯರನ್ನೂ ಸೆಳೆಯುತ್ತಿದೆ.

'ಚೋಕರ್‌ಗಳು ಕ್ಯಾಷುವಲ್ ಮತ್ತು ಫಾರ್ಮಲ್ ಉಡುಪುಗಳೊಂದಿಗೆ ಚೆನ್ನಾಗಿ ಬೆರೆಯುತ್ತದೆ. ಅನಾದಿ ಕಾಲದಿಂದಲೂ, ಭಾರತೀಯ ಶೈಲಿಯ ಚೋಕರ್ ನೆಕ್ಲೇಸ್ ಮಹಿಳೆಯರ ಮೊದಲ ಆಯ್ಕೆಯೇ ಆಗಿತ್ತು. ರತ್ನಗಳು ಮತ್ತು ಹೊಳೆಯುವ ವಜ್ರಗಳಿಂದ ಸುಂದರವಾಗಿ ರಚಿಸಲಾದ ಚೋಕರ್‌ಗಳು ಯಾವುದೇ ಸಂದರ್ಭಕ್ಕೂ ಹೊಂದಿಕೊಳ್ಳುತ್ತವೆ.



ಹೊಸ ಸಂಗ್ರಹದಲ್ಲಿ 18K ಹಳದಿ ಮತ್ತು ಬಿಳಿ ಚಿನ್ನದಲ್ಲಿ ರಚಿಸಲಾದ ಅದ್ಭುತವಾದ ಚೋಕರ್ ಲಭ್ಯ' ಎಂದು ಹೇಳುತ್ತಾರೆ ತನಿಷ್ಕ್ ಆಭರಣ ಮಳಿಗೆಯ ವಿನ್ಯಾಸ ವಿಭಾಗದ ಮುಖ್ಯಸ್ಥೆ ರೇವತಿ ಕಾಂತ್.

'ಮಕ್ಕಳಿಗಾಗಿಯೇ ರೂಪಿಸಲಾಗಿರುವ ಚೋಕರ್‌ಗಳಲ್ಲಿ ವಿವಿಧ ವಿನ್ಯಾಸದವು ಲಭ್ಯ. ಇವುಗಳನ್ನು ಮಕ್ಕಳೇ ತೊಡಬೇಕೆಂದಿಲ್ಲ. ದೊಡ್ಡವರೂ ಧರಿಸುವ ರೀತಿಯಲ್ಲೇ ಆಯ್ಕೆಗಳನ್ನು ಇಟ್ಟು ವಿನ್ಯಾಸ ಮಾಡಲಾಗಿದೆ. ಶುಭ ಸಮಾರಂಭಗಳಿಗೆ ಅತ್ಯಂತ ಸೂಕ್ತವಾದ ಚೋಕರ್‌ಗಳು 'ಎವರ್‌ಗ್ರೀನ್ ಫ್ಯಾಷನ್' ಎನಿಸಿದೆ' ಎನ್ನುತ್ತಾರೆ ಅವರು.